
ಸಾವಿರಾರು ವೀರಗಲ್ಲುಗಳು, ಅಂಥ ವೀರರೊಂದಿಗೆ ಸಹಗಮನ ಮಾಡಿ ಸ್ವರ್ಗಾರೋಹಣ ಮಾಡಿದ ನಾರಿಯರ ವೀರಸತಿ ಕಲ್ಲುಗಳು ನಾಡಿನ ತುಂಬೆಲ್ಲ ಇವೆ. ಆದರೆ, ಅವರೆಲ್ಲ ಸತ್ತು ಸ್ವರ್ಗ ಸೇರಿದರೇ ಎಂದು ತಂದು ವರದಿ ಒಪ್ಪಿಸಿದವರಿಲ್ಲ. ಈಗಲೂ ದೇಶಕ್ಕಾಗಿ ಯುದ್ಧದಲ್ಲಿ ಮಡಿವ ಯೋಧರ ಬಗ್ಗೆ ಅಪಾರ ಗೌರವ ಇದೆ. ಅವರಿಗೆ ಮತ್ತೇ ಹುಟ್ಟಿ ಬಾ ಎಂದು ನಾವು ಹಂಬಲಿಸುತ್ತೇವೆ. ಹಾಗೆಯೇ ಸೊಳ್ಳೆ ಅಥವಾ ದಿನಾಲು ಇತರ ಜೀವಿಗಳನ್ನು ಕೊಲ್ಲುತ್ತಿರುವವರು,ತಿಂದು ಬದುಕುತ್ತಿರುವವರು ನರಕಕ್ಕೆ ಹೋಗುತ್ತಾರೆ ಅನ್ನುವುದು ಖಚಿತವೇನಿಲ್ಲ. ಹಾಗೆ ಹೋಗುತ್ತಿದ್ದಲ್ಲಿ ನರಕ ಈಗಾಗಲೇ ಭರ್ತಿ ಆಗಿರಬೇಕು. ಅಲ್ಲಿ ಸ್ಥಳಾವಕಾಶ ಕೂಡ ಇರಲಿಕ್ಕಿಲ್ಲ. ಆದ್ದರಿಂದ ನಾನು ಸೊಳ್ಳೆ ಹತ್ಯೆ ಮುಂದುವರಿಸಬಹುದು ಎಂದುಕೊಳ್ಳುತ್ತ ಸಮಾಧಾನ ಪಡುತ್ತೇನೆ.

ಸೊಳ್ಳೆಗಳಂತೆ ಜಿರಳೆಗಳೂ (ಜೊಂಡಿಗ್ಯಾ) ಕೂಡ ಗ್ರಹ ಪೀಡೆಗಳೆ. ಆದರೆ, ಅವು ನಮ್ಮ ರಕ್ತ ಹೀರುವುದಿಲ್ಲ. ಜಿರಳೆಗಳನ್ನು ಕಂಡರೆ ನಾನು ಅವುಗಳನ್ನು ಉಪಾಯವಾಗಿ ಮನೆಯಿಂದ ಹೊರಹಾಕುತ್ತೇನೆ. ನನ್ನ ಶ್ರೀಮತಿಗೆ ಜಿರಳೆಗಳನ್ನು ಕಂಡರೆ ಸ್ವಲ್ಪವೂ ಆಗುವುದಿಲ್ಲ. ಅವುಗಳನ್ನು ಕಂಡಾಕ್ಷಣ ಕೈಗೆ ಸಿಗಬಹುದಾದ ಮನೆಯೊಳಗಿನ ಯಾವುದಾದರೂ ವಸ್ತು, ಉಪಕರಣಗಳನ್ನು ಬಳಸಿ ಅವಳು ಅವುಗಳನ್ನು ಸಂಹಾರ ಮಾಡುತ್ತಾಳೆ. ಅವುಗಳೊಂದಿಗೆ ತುಂಬಾ ನಿಷ್ಕರುಣೆಯಿಂದ ವರ್ತಿಸುತ್ತಾಳೆ. ಎಲ್ಲೆಲ್ಲಿಂದಲೋ ನುಸುಳಿ ಬರುವ ಅವುಗಳನ್ನು ವಾರದಲ್ಲಿ ಒಂದೆರಡು ಡಜನ್ ದಷ್ಟಾದರೂ ಅವಳು ಸಂಹರಿಸಿರುತ್ತಾಳೆ. ಆದರೆ, ಆ ಕುರಿತು ಅವಳಿಗೆ ಯಾವ ಪಾಪಪ್ರಜ್ಞೆ ಇದ್ದಂತಿಲ್ಲ.



'ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ', 'ನುಡಿಯೊಳಡಗಿವೆ ಸ್ವರ್ಗ-ನರಕಗಳು', 'ಆಚಾರವೇ ಸ್ವರ್ಗ ಅನಾಚಾರವೇ ನರಕ' ಎಂದು ಶರಣರು ಸ್ವರ್ಗ ನರಕ ಇಲ್ಲಿಯೇ ಅಂದರು. ಅದೇ ವೇಳೆ ಅವರು 'ಸಕಲ ಜೀವಾತ್ಮರಿಗೆ ಲೇಸನೇ ಬಯಸುವವರು... ಕುಲಜರು' ಅಂದರು. ಸಕಲ ಜೀವಿಗಳಲ್ಲಿ ಸೊಳ್ಳೆಗಳೂ ಒಳಗೊಂಡಿವೆಯೇ ಅನ್ನುವುದೇ ನನ್ನ ತೊಳಲಾಟ.

ಇನ್ನು ಪಾಪಪ್ರಜ್ಞೆ ಅನ್ನುವುದು ಮನುಷ್ಯನಿಗೆ ಮಾತ್ರ ಸೀಮಿತವಾಗಿದೆ, ಮನುಷ್ಯ ಮನುಷ್ಯರ ನಡುವಿನ ಕಾರ್ಯಕಾರಣ ಸಂಬಂಧಗಳಿಗೆ ಮಾತ್ರ ಅದು ಅನ್ವಯಿಸುವಂತದ್ದು ಎಂದು ಹೇಳಬಹುದಾದರೆ ಅಥವಾ ತಿಳಿಯಬಹುದಾದರೆ, ಮನುಷ್ಯ ಇತರ ಮನುಷ್ಯರೊಂದಿಗೆ ಉದ್ದಕ್ಕೂ ನಡೆದುಕೊಂಡ ಬಗೆ, ಅಥವಾ ಈಗಲೂ ನಡೆದುಕೊಳ್ಳುವ ಬಗೆ ನೋಡುವುದಾದರೆ ಪಾಪಪ್ರಜ್ಞೆಯಿಂದ ಅವನು ಬಳಲುವುದು ಸಹಜ. ನಿತ್ಯ ಜೀವನದಲ್ಲಿ ಇತರರೊಂದಿಗೆ ಅವನು ನಡೆಸುವ ಅಕ್ರಮ, ಅನೀತಿಯುತ ವ್ಯವಹಾರಗಳು,ನಡೆಸುವ ಹಿಂಸೆ, ಎಸಗುವ ಪ್ರಾಣಹಾನಿ ಒಂದೇ ಎರಡೇ. ಮಾನವ ಇತರ ಮಾನವರನ್ನು ಕೊಂದಷ್ಟು, ಅಥವಾ ಅಮಾನವೀಯವಾಗಿ ನಡೆದುಕೊಂಡಷ್ಟು ಬೇರೆ ಯಾವ ಜೀವಿಗಳೂ ಸ್ವಜಾತಿಯ ಜೀವಿಗಳೊಂದಿಗೆ ನಡೆದುಕೊಂಡಿಲ್ಲ. ಮನುಕುಲದ ಉದ್ದಕ್ಕು ನಡೆದ ಮೇಲಾಟದ ಯುದ್ಧಗಳಲ್ಲಿ ಪರಸ್ಪರರನ್ನು ಕೊಂದುಕೊಂಡದ್ದು ಸ್ವಲ್ಪವೇ? ಕಳೆದ ಒಂದೆರಡು ಶತಮಾನಗಳಲ್ಲಿ ನಡೆದ ಕ್ರಾಂತಿಗಳು,ಮಹಾಯುದ್ದಗಳಲ್ಲಿ ಹತರಾದವರಿಗೆ ಲೆಕ್ಕವಿದೆಯೆ? ಅಂಥ ಯುದ್ದಗಳಿಗೆ, ಜೀವಹಾನಿಗೆ, ಮನುಕುಲದ ಮಾರಣಹೋಮಕ್ಕೆ ಕಾರಣರಾದವರಿಗೆ ಎಂದಾದರು ಪಾಪಪ್ರಜ್ಞೆ ಅನ್ನುವುದು ಕಾಡಿತ್ತೆ?

ಇಂದು ನಮ್ಮ ಕಣ್ಮುಂದೆಯೇ ಕಳೆದ ಒಂದು ವರ್ಷದಾಟಿ ಮುಂದುವರಿದಿರುವ ಉಕ್ರೇನ್ ಯುದ್ದದಲ್ಲಿ ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ಭಾಗಿಯಾಗಿ ಆ ದೇಶದ ವಿನಾಶಕ್ಕೆ, ಅಸಂಖ್ಯ ಜನರ ಸಾವುನೋವುಗಳಿಗೆ ಕಾರಣರಾದವರಿಗೆ ಪಾಪಪ್ರಜ್ಞೆ ಕಾಡುವುದಿಲ್ಲವೇ. ಇವರು ಹೋಗಿ ಸೇರುವ ನರಕವಾದರು ಎಂಥದ್ದಿರಬಹುದು. ಪಾಪಪುಣ್ಯ ಬೋಧಿಸುವ ಧರ್ಮಗಳ ಹೆಸರಿನಲ್ಲಿ ನಡೆದ, ಈಗಲೂ ನಡೆವ ಪ್ರಾಣಹಾನಿ, ಹಿಂಸೆ, ಕ್ರೌರ್ಯ ಕಡಿಮೆಯೇ. ಇತರರನ್ನು ತುಳಿದು ಬದುಕುವ ಇಂದಿನ ನಾಗಾಲೋಟದ ಜಗತ್ತಿಗೆ ಎಂದಾದರೂ, ಯಾವುದಾದರೂ ಪ್ರಜ್ಞೆ ಅನ್ನುವುದು ಕಾಡಿದೆಯೇ?

ದೇವರು, ಧರ್ಮ, ನೈತಿಕ, ಅನೈತಿಕ, ಪಾಪಪುಣ್ಯ ಎಂಬ ವಿಚಾರಗಳು ಮನುಷ್ಯ ಹೆಚ್ಚು ಸಂವೇದನಾಶೀಲನಾದಂತೆ, ಒಳಿತು ಕೆಡಕುಗಳ